# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–ವಿಜಾಪುರ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನದ ಪರಿಕರಗಳನ್ನು ಪೂರೈಸುವಲ್ಲಿ ಲೋಪವೆಸಗಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ.**

*****

**ಓದಲಾಗಿದೆ:–**

1)ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 75 ಕೃಪವಿ 2011, ದಿನಾಂಕ:04-01-2014

2) ಶ್ರೀ ದೇವೇಂದ್ರಪ್ಪ ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು ವಿಜಾಪುರ ಇವರ ಲಿಖಿತ ಹೇಳಿಕೆ ದಿನಾಂಕ:28-04-2014

3) ಶ್ರೀ ಸುರೇಶ್ ಡಿ. ಭಾವಿಕಟ್ಟಿ, ಕೃಷಿ ಅಧಿಕಾರಿ(ತಾಂತ್ರಿಕ ಅಧಿಕಾರಿ), ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ವಿಜಾಪೂರ. ಇವರ ಲಿಖಿತ ಹೇಳಿಕೆ ದಿನಾಂಕ:14-02-2014

4)ಶ್ರೀ ಎ. ಎ. ಬಾಗಾಯತ, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ತಿಕೋಟಾ, ಬಿಜಾಪೂರ ಜಿಲ್ಲೆ. ಇವರ ಲಿಖಿತ ಹೇಳಿಕೆ ದಿನಾಂಕ:18-02-2014

5) ಶ್ರೀ ಆರ್ ಎಂ ಬಿದರಿ, ಕೃಷಿ ಅಧಿಕಾರಿ, (ತಾಂತ್ರಿಕ ಸಹಾಯಕರು) ರೈತ ಸಂಪರ್ಕ ಕೇಂದ್ರ ತಿಕೋಟಾ. ಇವರ ಲಿಖಿತ ಹೇಳಿಕೆ ದಿನಾಂಕ:14-02-2014

**ಪ್ರಸ್ತಾವನೆ:–**

ಮೇಲೆ ಕ್ರಮ ಸಂ. (1)ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದಲ್ಲಿ, ವಿಜಾಪೂರ ಜಿಲ್ಲೆಯ ಕೃಷಿ ಇಲಾಖೆಯಲ್ಲಿನ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರೈತರಿಗೆ ಸಬ್ಸಿಡಿ ದರದಲ್ಲಿ ನೀಡಬೇಕಾದ ಕೃಷಿ ಪರಿಕರಗಳನ್ನು ಪರಿಕರಗಳನ್ನು ಫಲಾನುಭವಿಗಳಿಗೆ ಸರಿಯಾಗಿ ಸರಬರಾಜು ಹಾಗೂ ವಿತರಣೆ ಮಾಡದೇ ಕೃಷಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸದೇ ಇರುವುದು ಕಂಡು ಬಂದಿರುವುದರಿಂದ ಈ ಕೆಳಕಂಡ 4 ಜನ ಅಧಿಕಾರಿಗಳ ವಿರುದ್ಧ ಸದರಿ ಆಪಾದನೆಗೆ ಸಂಬಂಧಿಸಿದಂತೆ ಅವರ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11 ರಡಿಯಲ್ಲಿ ಮತ್ತು ಸೇವೆಯಿಂದ ನಿವೃತ್ತರಾದವರ ಮೇಲೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214ರಡಿ ಕಾರಣ ಕೇಳುವ ಪತ್ರವನ್ನು ಆಪಾದನಾಪಟ್ಟಿಯೊಂದಿಗೆ ಜಾರಿ ಮಾಡಲಾಗಿತ್ತು.

1)ಶ್ರೀ ದೇವೇಂದ್ರಪ್ಪ ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು ವಿಜಾಪುರ

2)ಶ್ರೀ ಸುರೇಶ್ ಡಿ. ಭಾವಿಕಟ್ಟಿ. ಕೃಷಿ ಅಧಿಕಾರಿ(ತಾಂತ್ರಿಕ ಅಧಿಕಾರಿ). ಸಹಾಯಕ ಕೃಷಿ ನಿರ್ದೇಶಕರ ಕಚೇರಿ. ವಿಜಾಪೂರ.

3) ಶ್ರೀ ಎ. ಎ. ಬಾಗಾಯತ, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ತಿಕೋಟಾ. ಬಿಜಾಪೂರ ಜಿಲ್ಲೆ.

4) ಶ್ರೀ ಆರ್ ಎಂ ಬಿದರಿ, ಕೃಷಿ ಅಧಿಕಾರಿ, (ತಾಂತ್ರಿಕ ಸಹಾಯಕರು) ರೈತ ಸಂಪರ್ಕ ಕೇಂದ್ರ ತಿಕೋಟಾ.

ಮೇಲೆ ಕ್ರಮ ಸಂಖ್ಯೆ (2) ರಿಂದ (5)ರವರೆಗಿನ ಓದಲಾದ ಪತ್ರಗಳಲ್ಲಿ, ಮೇಲ್ಕಂಡ ಅಧಿಕಾರಿಗಳು ಲಿಖಿತ ಹೇಳಿಕೆ ಸಲ್ಲಿಸಿ, ತಮ್ಮ ಮೇಲಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ಸದರಿ ಅಧಿಕಾರಿಗಳ ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಮೇಲಿನ ಆರೋಪಗಳೊಂದಿಗೆ ತುಲನೆ ಮಾಡಿದಾಗ ಅವರ ಹೇಳಿಕೆಗಳಲ್ಲಿ ಒಪ್ಪಬಹುದಾದ ಅಂಶಗಳು ವ್ಯಕ್ತವಾಗಿರುವುದಿಲ್ಲ. ಆದ್ದರಿಂದ ಈ ವಿಚಾರವಾಗಿ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಈ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಗುರಿಪಡಿಸಲು ನಿರ್ಧರಿಸಿದ್ದು, ಅದರಂತೆ ಶ್ರೀ ಎಂ.ಜಿ ಹಿರೇಮಠ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿ, ಮತ್ತು ಶ್ರೀ ಮಧುಸೂಧನ ಮೂರ್ತಿ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿಯ ಮಂಡನಾಧಿಕಾರಿಯನ್ನಾಗಿ ನೇಮಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಕೃತೋಇ 75 ಕೃಪವಿ 2011</u>**
**<u>ಬೆಂಗಳೂರು, ದಿನಾಂಕ:07-07-2014.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಈ ಕೆಳಕಂಡ ಅಧಿಕಾರಿಗಳು ಎಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿ ಇಲಾಖಾ ವಿಚಾರಣೆ ನಡೆಸಲು, ಶ್ರೀ ಎಂ.ಜಿ ಹಿರೇಮಠ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿಯ ವಿಚಾರಣಾಧಿಕಾರಿಯನ್ನಾಗಿ, ಮತ್ತು ಶ್ರೀ ಮಧುಸೂಧನ ಮೂರ್ತಿ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

1)ಶ್ರೀ ದೇವೇಂದ್ರಪ್ಪ ಭಜಂತ್ರಿ, ಸಹಾಯಕ ಕೃಷಿ ನಿರ್ದೇಶಕರು ವಿಜಾಪುರ

2)ಶ್ರೀ ಸುರೇಶ್ ಡಿ. ಭಾವಿಕಟ್ಟಿ, ಕೃಷಿ ಅಧಿಕಾರಿ(ತಾಂತ್ರಿಕ ಅಧಿಕಾರಿ), ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ವಿಜಾಪೂರ.

3) ಶ್ರೀ ಎ. ಎ. ಬಾಗಾಯತ, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ ತಿಕೋಟಾ. ಬಿಜಾಪೂರ ಜಿಲ್ಲೆ.

4) ಶ್ರೀ ಆರ್ ಎಂ ಬಿದರಿ, ಕೃಷಿ ಅಧಿಕಾರಿ, (ತಾಂತ್ರಿಕ ಸಹಾಯಕರು) ರೈತ ಸಂಪರ್ಕ ಕೇಂದ್ರ ತಿಕೋಟಾ.

ಪ್ರಕರಣದ ವಿಚಾರಣೆಯನ್ನು ಮೂರು ತಿಂಗಳೊಳಗಾಗಿ ಮುಗಿಸಿ ವಿಚಾರಣಾ ವರದಿಯನ್ನು ಸಕಾರಕ್ಕೆ ಸಲ್ಲಿಸಲು ಕೋರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಜಂಟಿ ಕೃಷಿ ನಿರ್ದೇಶಕರು, ವಿಜಾಪುರ ಜಿಲ್ಲೆ
4) ಶ್ರೀ ಎಂ.ಜಿ. ಹೀರೇಮಠ್ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ನಂ.746, 15ನೇ ಮೇನ್, ಜುಡಿಷಿಯಲ್ ಲೇಔಟ್ ಅಲ್ಲಾಳಸಂದ್ರ, ಜಿಕೆವಿಕೆ ಪೋಸ್ಟ್ ಬೆಂಗಳೂರು(ರಿಜಿಸ್ಟರ್ ಅಂಚೆ ಮೂಲಕ)
5) ಶ್ರೀ ಮಧುಸೂಧನ ಮೂರ್ತಿ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
6) ಸಹಾಯಕ ಕೃಷಿ ನಿರ್ದೇಶಕರು, ವಿಜಾಪುರ ಜಿಲ್ಲೆ
7) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ
8) ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ, ಬೆಂಗಳೂರು.
9) ಸಮನ್ವಯ ಶಾಖೆ/ ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.